**ಅಧ್ಯಕ್ಷರು :** ಈ ಬಗ್ಗೆ ನೀವು ಪ್ರತ್ಯೇಕವಾದ ಪ್ರಶ್ನೆ ಕೇಳಬೇಕು.

**ಶ್ರೀ ವೈ.ಎಸ್.ವಿ.ದತ್ತಾ :** ಪ್ರತ್ಯೇಕ ಪ್ರಶ್ನೆಯಲ್ಲ. 80 ಕೋಟಿಗೆ tender ಆದಮೇಲೆ ಇನ್ನು ಪುಸ್ತಕಗಳನ್ನು supply ಮಾಡಿಲ್ಲವೆಂದರೆ ಹೇಗೆ ?

**ಅಧ್ಯಕ್ಷರು :** ನೀವು ಪ್ರತ್ಯೇಕ ಪ್ರಶ್ನೆ ಕೇಳಿ.

**ಶ್ರೀ ವೈ.ಎಸ್.ವಿ. ದತ್ತಾ :** ಇದು ಪಠ್ಯ ಪುಸ್ತಕಗಳಿಗೆ ಸಂಬಂಧಪಟ್ಟದ್ದೆ. ಈಗ ನನ್ನ ಲೆಕ್ಕದ ಪ್ರಕಾರ ವಿದ್ಯಾರ್ಥಿಗಳ ಮೇಲೆ ಶೇಕಡ 34.7% ಹೊರೆ ನಮ್ಮ ಮಕ್ಕಳ ಮೇಲೆ ಬೀಳುತ್ತದೆ. ಯಾವನಿಗೊ ರೂ.80 ಕೋಟಿ tender ಆಗಿದೆ.

**ಶ್ರೀ ಕಿಮ್ಮನೆ ರತ್ನಾಕರ :** ಈಗಾಗಲೇ ನಾಳೆ ಪದವಿ ಪೂರ್ವ ತರಗತಿ ಪ್ರವೇಶಕ್ಕೆ last date ಇದೆ, ಈಗಾಗಲೇ 60% ನಷ್ಟು ಪುಸ್ತಕಗಳು ಸರಬರಾಜು ಆಗಿದೆ. Tender ಆಗಿದ್ದರ ಬಗ್ಗೆ dispute ಇತ್ತು. ಹೀಗಾಗಿ ನ್ಯಾಯಾಲಯಕ್ಕೆ ಹೋಗಿದ್ದರಿಂದ ಸ್ವಲ್ಪ ವಿಳಂಬವಾಯಿತು. ಎರಡು tender ನವರು ನ್ಯಾಯಾಲಯಕ್ಕೆ approach ಮಾಡಿದ್ದರಿಂದ ಸ್ವಲ್ಪ ಮಟ್ಟಿಗೆ ಸಮಸ್ಯೆಯಾಯಿತು. ಆದರೆ, ಇನ್ನೊಂದು ವಾರದೊಳಗೆ ಪೂರ್ಣ ರೀತಿಯ books, ಆದರೆ, ಹೆಚ್ಚಿಗೆ ಸಂಖ್ಯೆ ಇರುವ title ಇರುವ ಪುಸ್ತಕಗಳೆಲ್ಲವೂ print ಆಗಿವೆ. ಕಡಿಮೆ ಸಂಖ್ಯೆ ಇರುವ ಅಂದರೆ ಉರ್ದು, ಮತ್ತಿತರ ಪುಸ್ತಕಗಳು ಅಂದರೆ ಬರಿ 500, 600, 1000 ಪುಸ್ತಕಗಳು print ಆಗುವಂಥವುಗಳು 30 ರಿಂದ 31 ಇದೆ. ಅದು ಇನ್ನೊಂದು ವಾರದಲ್ಲಿ complete ಆಗುತ್ತದೆ. ತಾವು ಈಗ ಏನು ಹೇಳಿದಿರಿ ಅದನ್ನು ನಾನು ವಿಸ್ತೃತವಾಗಿ ಚರ್ಚೆ ಮಾಡುವುದಕ್ಕೆ ಸಿದ್ಧನಿದ್ದೇನೆ. ನಮ್ಮಿಂದ ಯಾವುದೇ ರೀತಿಯಿಂದ ಆಗಿಲ್ಲ. Tender ಮೇಲೆ ಆಗಿರತಕ್ಕಂಥ ಪ್ರಕ್ರಿಯೆ ಅದು. ಇಡೀ ದೇಶದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ಪುಸ್ತಕಗಳನ್ನು ಕೊಡುತ್ತಿದ್ದೇವೆ. ಇದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಈಗ ಏನು ತಾವು ಹೇಳುತ್ತಿದ್ದೀರಿ, ಆ ಪುಸ್ತಕಗಳನ್ನು ಬೇಕಾದರೆ ಇಲ್ಲಿಗೆ ತರಿಸುತ್ತೇನೆ. It is the lowest price all over India.

**ಅಧ್ಯಕ್ಷರು :** ಬೇಡ ಬೇಡ.

**ಶ್ರೀ ವೈ.ಎಸ್.ವಿ. ದತ್ತಾ :** ನನ್ನ ಹತ್ತಿರ ಇರುವ ಮಾಹಿತಿಗಳನ್ನು ತಮಗೆ ಕಳುಹಿಸಿ ಕೊಡುತ್ತೇನೆ.

**ವಿವಿಧ ಯೋಜನೆಗಳಡಿ ಶೌಚಾಲಯಗಳ ನಿರ್ಮಾಣ**

**37(349) ಶ್ರೀ ಸುಧಾಕರ ಲಾಲ್ ಪಿ.ಆರ್. (ಕೊರಟಗೆರೆ) :–** ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಆ) ಕೊರಟಗೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಗ್ರಾಮಗಳಲ್ಲಿ ನಿರ್ಮಲ ಭಾರತ್ ಅಭಿಯಾನ, ನರೇಗಾ ಯೋಜನೆಯಡಿ ಶೌಚಾಲಯಗಳನ್ನು ನಿರ್ಮಾಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ ಎಷ್ಟು ಶೌಚಾಲಯಗಳನ್ನು ನಿರ್ಮಾಣ ಮಾಡಲಾಗಿದೆ; (ಹಳ್ಳಿಗಳ ಹೆಸರಿನೊಂದಿಗೆ ಪಂಚಾಯಿತಿವಾರು ಯೋಜನೆಯ ವಿವರ ನೀಡುವುದು)

(ಇ) ಶೌಚಾಲಯ ನಿರ್ಮಿಸಿಕೊಂಡಿರುವ ಅರ್ಹ ಫಲಾನುಭವಿಗಳಿಗೆ ಹಣ ಪಾವತಿಸಲಾಗಿದೆಯೇ; ಹಾಗಿದ್ದಲ್ಲಿ ಪಾವತಿಸಿರುವ ಮೊತ್ತವೆಷ್ಟು; ಪಾವತಿಸಲು ಬಾಕಿ ಇರುವ ಫಲಾನುಭವಿಗಳು ಹಾಗೂ ಮೊತ್ತವೆಷ್ಟು; (ಯೋಜನೆ ಹಾಗೂ ಪಂಚಾಯಿತಿವಾರು ವಿವರ ನೀಡುವುದು)

(ಈ) ಪಾವತಿಸದೇ ಬಾಕಿ ಇರುವ ಕಾರಣಗಳೇನು; ಪಾವತಿಸಲು ಸರ್ಕಾರ ಕಾಲಮಿತಿಯೇನಾದರೂ ವಿಧಿಸಿದೆಯೇ, ಹಾಗಿದ್ದಲ್ಲಿ, ಯಾವಾಗ ಪಾವತಿಸಲಾಗುವುದು?

**ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :–**

(ಅ) ಕೊರಟಗೆರೆ ತಾಲ್ಲೂಕಿನಲ್ಲಿ 23 ಗ್ರಾಮ ಪಂಚಾಯಿತಿಗಳಿದ್ದು, ನಿರ್ಮಲ್ ಭಾರತ್ ಅಭಿಯಾನ ಮತ್ತು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯೊಂದಿಗೆ ಒಗ್ಗೂಡಿಸುವಿಕೆಯಿಂದ ವೈಯಕ್ತಿಕ ಗೃಹ ಶೌಚಾಲಯಗಳನ್ನು ನಿರ್ಮಾಣ ಮಾಡಲಾಗುತ್ತಿದೆ.

(ಆ) ಕೊರಟಗೆರೆ ತಾಲ್ಲೂಕಿನ 23 ಗ್ರಾಮ ಪಂಚಾಯಿತಿಗಳಲ್ಲಿ 2012–13ನೇ ಸಾಲಿನಲ್ಲಿ 530 ಮತ್ತು 2013–14ನೇ ಸಾಲಿನಲ್ಲಿ 1230 ಒಟ್ಟಾರೆ 1760 ವೈಯಕ್ತಿಕ ಶೌಚಾಲಯಗಳನ್ನು ನಿರ್ಮಾಣ ಮಾಡಲಾಗಿದೆ. (ಪಂಚಾಯಿತಿವಾರು ಹಾಗೂ ಗ್ರಾಮವಾರು ವಿವರಗಳನ್ನು ಅನುಬಂಧ 1 ರಲ್ಲಿ ಲಗತ್ತಿಸಿದೆ)

(ಇ) ಶೌಚಾಲಯಗಳನ್ನು ನಿರ್ಮಾಣ ಮಾಡಿಕೊಂಡು ಬಳಸುತ್ತಿರುವ ಫಲಾನುಭವಿಗಳಿಗೆ ಹಣವನ್ನು ಪಾವತಿಸಲು ಕ್ರಮವಹಿಸಲಾಗಿದೆ. ಅದರಂತೆ, 2012–13ನೇ ಸಾಲಿನಲ್ಲಿ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸಿಕೊಂಡು ಬಳಸುತ್ತಿರುವ ಹಾಗೂ ಯೋಜನೆಯ ಮಾರ್ಗಸೂಚಿಗಳಂತೆ ಅರ್ಹ ಫಲಾನುಭವಿಗಳಿಗೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರೂ.22,26,000/–ಗಳು ಮತ್ತು ನಿರ್ಮಲ್ ಭಾರತ್ ಅಭಿಯಾನ ಕಾರ್ಯಕ್ರಮದಡಿ ರೂ.24,91,000/–ಗಳು, ಒಟ್ಟು ರೂ.47,17,000/–ಗಳನ್ನು ಪಾವತಿಸಲಾಗಿದೆ.(ಅನುಬಂಧ **2ಎ** ಅನ್ನು ಲಗತ್ತಿಸಿದೆ) 2013–14ನೇ ಸಾಲಿನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ

ಯೋಜನೆಯಡಿ ರೂ.35,71,210/–ಗಳು ಮತ್ತು ನಿರ್ಮಲ್ ಭಾರತ್ ಅಭಿಯಾನ ಕಾರ್ಯಕ್ರಮದಡಿ ರೂ.52,07,600/–ಗಳು, ಒಟ್ಟು ರೂ.87,78,810/– ಗಳನ್ನು ಪಾವತಿಸಲಾಗಿದೆ.(ಪಂಚಾಯಿತಿವಾರು ಮಾಹಿತಿಯನ್ನು ಅನುಬಂಧ 2ಬಿ ಅನ್ನು ಲಗತ್ತಿಸಿದೆ) 2013–14ನೇ ಸಾಲಿನಲ್ಲಿ ಪಾವತಿಗೆ ಬಾಕಿ ಯಾವುದೂ ಇರುವುದಿಲ್ಲ.

2013–14ನೇ ಸಾಲಿನಲ್ಲಿ ಕೊರಟಗೆರೆ ತಾಲ್ಲೂಕಿನಲ್ಲಿ ಒಟ್ಟು 52 ಫಲಾನುಭವಿಗಳಿಗೆ ನಿರ್ಮಲ್ ಭಾರತ್ ಅಭಿಯಾನ ಕಾರ್ಯಕ್ರಮದಡಿ ರೂ.2,44,400 ಗಳು ಮತ್ತು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರೂ.19,63,790/–ಗಳನ್ನು ಪಾವತಿಸಲು ಬಾಕಿ ಇರುತ್ತದೆ.

(ಈ) ನಿರ್ಮಲ್ ಭಾರತ್ ಅಭಿಯಾನ ಕಾರ್ಯಕ್ರಮದಡಿ ಪ್ರೋತ್ಸಾಹ ಧನವನ್ನು ಶೌಚಾಲಯಗಳನ್ನು ನಿರ್ಮಿಸಿ ಬಳಸುತ್ತಿರುವುದನ್ನು ದೃಢೀಕರಿಸಿಕೊಂಡು ಹಣ ಪಾವತಿಸಲು ಕ್ರಮವಹಿಸಲಾಗಿದೆ. ನಿರ್ಮಲ ಭಾರತ ಅಭಿಯಾನದಡಿ ರೂ.4700/–ಗಳನ್ನು ಪ್ರೋತ್ಸಾಹ ಧನವನ್ನಾಗಿ ಪಾವತಿಸಲಾಗುತ್ತಿದೆ. ಕೆಲವು ವೈಯಕ್ತಿಕ ಶೌಚಾಲಯಗಳು ಕೊನೆಯ ನಿರ್ಮಾಣ ಹಂತದಲ್ಲಿರುವುದರಿಂದ ಪ್ರೋತ್ಸಾಹ ಧನ ಪಾವತಿಸಲು ಬಾಕಿ ಇರುತ್ತದೆ. ಶೌಚಾಲಯ ನಿರ್ಮಾಣ ಕಾಮಗಾರಿಯು ಪೂರ್ಣಗೊಂಡು ಬಳಸುತ್ತಿರುವುದನ್ನು ಪರಿಶೀಲಿಸಿದ ನಂತರ ಉಳಿಕೆ ಫಲಾನುಭವಿಗಳಿಗೆ ರೂ.2,44,400/–ಗಳನ್ನು ಪಾವತಿಸಲು ಕ್ರಮವಹಿಸಲಾಗುವುದು. (ಸದರಿ ಅನುದಾನವು ಗ್ರಾಮ ಪಂಚಾಯಿತಿಗಳಲ್ಲಿ ಲಭ್ಯವಿರುತ್ತದೆ)

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ, ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಳ್ಳುತ್ತಿರುವ ಫಲಾನುಭವಿಗಳಿಗೆ ಮಾನವ ದಿನಗಳ ಕೂಲಿ ಮೊತ್ತವಾದ ರೂ.4500/–ಗಳನ್ನು (ದಿನಾಂಕ: 06–01–2014 ಕ್ಕಿಂತ ಹಿಂದಿನ ದಿನಾಂಕದಲ್ಲಿ ಶೌಚಾಲಯ ನಿರ್ಮಾಣಕ್ಕೆ ಅನುಮೋದನೆ ಪಡೆದ ಫಲಾನುಭವಿಗಳಿಗೆ) ಇ.ಎಫ್.ಎಂ.ಎಸ್. (ನೇರ ನಗದು ವರ್ಗಾವಣೆ) ಮುಖಾಂತರ ಫಲಾನುಭವಿಗಳ ಖಾತೆಗೆ ನೇರವಾಗಿ ಜಮಾ ಮಾಡಲಾಗುತ್ತದೆ. ಜಿಲ್ಲೆಯ ಇ.ಎಫ್.ಎಂ.ಎಸ್. ಖಾತೆಯಲ್ಲಿ ಅನುದಾನವು ಲಭ್ಯವಿಲ್ಲದ ಕಾರಣ ಬಾಕಿ ಇರುತ್ತದೆ. ಕೇಂದ್ರ ಸರ್ಕಾರದಿಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಹಣ ಬಿಡುಗಡೆ ಆದ ನಂತರ ಬಾಕಿ ಇರುವ ಒಟ್ಟು ಮೊತ್ತವನ್ನು ಅರ್ಹ ಫಲಾನುಭವಿಗಳಿಗೆ ಪಾವತಿಸಲಾಗುವುದು.

ಅನುಬಂಧ-೬

ಪಾವಗಡ ಪಂಚಾಯತ್, ಪೋರೆಬಸಪ, ಜಿಲ್ಲಾ ಪಂಚಾಯತ್, ತುಮಕೂರು.

ಎಸ್.ಡಿ.ಪಿ. ಮತ್ತು ನರೇಗಾ ಯೋಜನೆಯಡಿ ಗ್ರಾಮವಾರು ವೈದ್ಯಕೀಯ ಶೌಚಾಲಯಗಳ ಭೌತಿಕ ಪ್ರಗತಿ ವಿವರ (2012-15ನೇ ಸಾಲು)

| ಕ್ರ ಸಂ | ಗ್ರಾಪಂ. ಹೆಸರು | ಗ್ರಾಮದ ಹೆಸರು | ನಿರ್ಮಾಣಗೊಂಡಿರುವ ಶೌಚಾಲಯಗಳ ಸಂಖ್ಯೆ |
|---|---|---|---|
| 1 | ಅಗ್ರಹಾರ | ಅಗ್ರಹಾರ | 27 |
| | | ನವಿಲುಕುರಿಕೆ | 24 |
| | | ಡಿ.ಎಂ.ಪಾಳ್ಯ | 4 |
| | | ಜಂಪೇನಹಳ್ಳಿ | 5 |
| | | ಕಲ್ಲುಗುಟ್ಟಹಳ್ಳಿ | 2 |
| | | ಒಟ್ಟು | 62 |
| 2 | ಅಕ್ಕರಾಂಮರ | ಅಕ್ಕರಾಂಮರ | 14 |
| | | ಆರ್. ವೆಂಕಟಾಮರ | 6 |
| | | ಕತ್ತಿನಾಗೇನಹಳ್ಳಿ | 6 |
| | | ಕಾದಿಲಮರ | 3 |
| | | ನೋಂಮರ | 2 |
| | | ಪೊನಹಳ್ಳಿ | 2 |
| | | ಅಮ್ಮನಹಳ್ಳಿ | 1 |
| | | ಒಟ್ಟು | 34 |
| 3 | ಅರಸಾಮರ | ಅರಸಾಮರ | 10 |
| | | ಅಗ್ರಹಾರ | 6 |
| | | ಕಳ್ಳಾಳ್ಳ | 5 |
| | | ಕಾಶಾಮರ | 8 |
| | | ಭೈರೇನಹಳ್ಳಿ | 5 |
| | | ಮಾದೇನಹಳ್ಳಿ | 2 |
| | | ಒಟ್ಟು | 36 |
| 4 | ವಿ.ಡಿ.ಮರ | ವಿ.ಡಿ. ಮರ | 8 |
| | | ಅಚ್ಚಾಪಹಳ್ಳಿ | 6 |
| | | ಅವುಲಾರನಹಳ್ಳಿ | 2 |
| | | ಆವಲಯ್ಯನಪಾಳ್ಯ | 3 |
| | | ಚಕ್ಕಪಾಳ್ಯ | 4 |
| | | ಚಟ್ಟೇನಹಳ್ಳಿ | 2 |
| | | ತಿಗಳರಪಾಳ್ಯ | 6 |
| | | ತೊಗರಿಘಟ್ಟ | 8 |
| | | ಪಣ್ಣೇನಹಳ್ಳಿ | 1 |
| | | ಬೀಕೇಕಲ್ಲಹಳ್ಳಿ | 1 |
| | | ಲಿಂಗದವೀರನಹಳ್ಳಿ | 1 |
| | | ಒಟ್ಟು | 42 |
| 5 | ಬೂದಗವಿ | ಬೂದಗವಿ | 2 |
| | | ದೊಗ್ಗನಹಳ್ಳಿ | 6 |
| | | ಸಿ.ಎನ್.ದುರ್ಗ | 4 |
| | | ಗೌಡಗಲ್ಲು | 6 |
| | | ನೇಗಲಾಲ; | 11 |
| | | ಬೆಂಡೋಣಿ | 2 |
| | | ಮಲ್ಲೇಕಾವು | 4 |
| | | ಒಟ್ಟು | 35 |
| | | ಗುಟ್ಟಗೊಲ್ಲಹಳ್ಳಿ | 2 |
| | | ಶ್ರೀನಿವಾಸಪುರ | 1 |
| | | ಬವಕ | 1 |

| ಪಾಲ್ಗೊಳಿಸಿದ ಸಂಸದರ್, ಕೊಡುಗರೆ. | | ಪಲ್ಲಾ ಪಂಚಾಯತ್, ಹುಮಕೂರು. |
|---|---|---|
| ಎನ್.ಬಿ.ಎ. ಮತ್ತು ನಿರೀಕ್ಷಾ ಯೋಜನೆಯಡಿ ಗ್ರಾಮವಾರು ವೈಯಕ್ತಿಕ ಶೌಚಾಲಯಗಳ ಘಟಕ ಪ್ರಗತಿ ವಿವರ (2012-13ನೇ ಸಾಲು) | | |
| ಒಟ್ಟಿ | | 4 |
| 7 | ಬೈಚಾಮರ | ಬೈಚಾಮರ | 5 |
| | | ಬುಡ್ಡನಪಳ್ಳಿ | 2 |
| ಒಟ್ಟಿ | | | 7 |
| 8 | ಚನ್ನಪಳ್ಳಿ | ಚನ್ನಪಳ್ಳಿ | 1 |
| | | ಭೈರಗೊಂಡ್ಲು | 1 |
| ಒಟ್ಟಿ | | | 2 |
| 9 | ದೊಡ್ಡಸಾಗ್ಗೆರೆ | ದೊಡ್ಡಸಾಗ್ಗೆರೆ | 8 |
| | | ಆರವನಪಳ್ಳಿ | 2 |
| | | ಗದಮುದ್ದನಪಳ್ಳಿ | 11 |
| | | ಎಂಗೊಲ್ಲಪಳ್ಳಿ | 2 |
| ಒಟ್ಟಿ | | | 23 |
| 10 | ಕಂಚಪಳ್ಳಿ | ಕಂಚಪಳ್ಳಿ | 2 |
| | | ನಾಗೇನಪಳ್ಳಿ | 1 |
| | | ಕಣ್ಣೇನಪಳ್ಳಿ | 3 |
| | | ಬಜ್ಜನಪಳ್ಳಿ | 2 |
| ಒಟ್ಟಿ | | | 8 |
| 11 | ಹೊಳವನಪಳ್ಳಿ | ಹೊಳವನಪಳ್ಳಿ | 15 |
| | | ಕರಕಲಘಟ್ಟ | 5 |
| | | ರುಗ್ಗೇನಪಳ್ಳಿ | 4 |
| ಒಟ್ಟಿ | | | 24 |
| 12 | ಹೂಲಿಕುಂಟೆ | ಹೂಲಿಕುಂಟೆ | 5 |
| | | ಗೌರಾಪಳ್ಳಿ | 3 |
| ಒಟ್ಟಿ | | | 8 |
| 13 | ಕೋಡಾಲ | ಕೋಡಾಲ | 2 |
| | | ಮಲಗೋನಪಳ್ಳಿ | 4 |
| | | ಹನುಮಂತಗಿರಿ | 6 |
| | | ಗೊಪೇನಪಳ್ಳಿ | 4 |
| ಒಟ್ಟಿ | | | 16 |
| | | ಮಣಿವಿನಕುರಿಕೆ | 5 |
| ಒಟ್ಟಿ | | | 5 |
| 15 | ಕ್ಯಾಮೇನಪಳ್ಳಿ | ಕ್ಯಾಮೇನಪಳ್ಳಿ | 2 |
| | | ಬದರೋಟಿ | 2 |
| | | ಕೋಡ್ಲಪಳ್ಳಿ | 3 |
| | | ಚಂಮಾನಪಳ್ಳಿ | 1 |
| | | ಚಕ್ಕುವಳ್ಳಿ | 1 |
| | | ಕಮಿನಿತಿಮ್ಮನಪಳ್ಳಿ | 3 |
| | | ಹೊಸ್ಸಾರನಪಳ್ಳಿ | 5 |
| ಒಟ್ಟಿ | | | 17 |
| 17 | ನೀಲಗೊಂಡನಪಳ್ಳಿ | ನೀಲಗೊಂಡನಪಳ್ಳಿ | 2 |
| | | ಇರಕಸಂದ್ರ | 1 |
| | | ಆಲಾಲಸಂದ್ರ | 1 |
| | | ಜಕ್ಕವಾಲನಪಳ್ಳಿ | 2 |
| | | ಪಳನೂಪ್ಪನಪಳ್ಳಿ | 1 |
| | | ದೊಡ್ಡವಾಲನಪಳ್ಳಿ | 2 |
| | | ಹೊಸಕೋಟೆ | 2 |

ತಾಲ್ಲೂಕಿನ ಪಂಚಾಯತ್, ಕೊರಟಗೆರೆ, ಜಿಲ್ಲಾ ಪಂಚಾಯತ್, ತುಮಕೂರು.

ಎನ್.ಬಿ.ಎ. ಮತ್ತು ನರೇಗಾ ಯೋಜನೆಯಡಿ ಗ್ರಾಮವಾರು ವೈಯಕ್ತಿಕ ಶೌಚಾಲಯಗಳ ಭೌತಿಕ ಪ್ರಗತಿ ವಿವರ (2013–14ನೇ ಸಾಲು)

| ಕ್ರ ಸಂ | ಗ್ರಾ.ಪಂ. ಹೆಸರು | ಗ್ರಾಮದ ಹೆಸರು | ನಿರ್ಮಾಣಗೊಂಡಿರುವ ಶೌಚಾಲಯಗಳ ಸಂಖ್ಯೆ |
|---|---|---|---|
| 1 | ಅಗ್ರಹಾರ | ಅಗ್ರಹಾರ | 45 |
| | | ನವಿಲುಕುರಿಕೆ | 27 |
| | | ಥರಟಿ | 5 |
| | | ಅಜ್ಜಿಹಳ್ಳಿ | 5 |
| | | ಡಿ.ಎಂ.ಪಾಳ್ಯ | 8 |
| | | ಜಂಪೇನಹಳ್ಳಿ | 5 |
| | | ಕಲ್ಲುಗುಟ್ಟರಹಳ್ಳಿ | 5 |
| | ಒಟ್ಟು | | 100 |
| 2 | ಅಕ್ಕಿರಾಂಪುರ | ಅಕ್ಕಿರಾಂಪುರ | 44 |
| | | ಆರ್. ವೆಂಕಟಾಪುರ | 8 |
| | | ಕತ್ತಿನಾಗೇನಹಳ್ಳಿ | 5 |
| | | ಕಾದಿಲಪುರ | 15 |
| | | ಸೋಂಪುರ | 9 |
| | | ಹೊಸಹಳ್ಳಿ | 22 |
| | | ಅಮ್ಮನಹಳ್ಳಿ | 2 |
| | ಒಟ್ಟು | | 105 |
| 3 | ಅರಸಾಪುರ | ಅರಸಾಪುರ | 24 |
| | | ಅಗ್ರಹಾರ | 1 |
| | | ಕಳ್ಳಪಾಳ್ಯ | 19 |
| | | ಕಾಶಾಪುರ | 6 |
| | | ಭೈರೇನಹಳ್ಳಿ | 16 |
| | | ಮಾದೇನಹಳ್ಳಿ | 6 |
| | | ಸಿದ್ದಲಿಂಗಯ್ಯನಪಾಳ್ಯ | 2 |
| | ಒಟ್ಟು | | 74 |
| 4 | ಬಿ.ಡಿ.ಪುರ | ಬಿ.ಡಿ. ಪುರ | 15 |
| | | ಅಕ್ಕಾಜಿಹಳ್ಳಿ | 3 |
| | | ಅವುದಾರನಹಳ್ಳಿ | 1 |
| | | ಆವಲಯ್ಯನಪಾಳ್ಯ | 2 |
| | | ಕದುರಯ್ಯನಪಾಳ್ಯ | 1 |
| | | ಕರೆಚಕ್ಕನಹಳ್ಳಿ | 1 |
| | | ಚಿಕ್ಕಪಾಳ್ಯ | 3 |

ಕಾರ್ಯಪಾಲಕ ಅಭಿಯಂತರರು, ಕೊಪ್ಪಳ ಜಿಲ್ಲಾ ಪಂಚಾಯತ್, ಕೊಪ್ಪಳ.

ಎನ್.ಎಸ್.ಎ. ಮತ್ತು ನರೇಗಾ ಯೋಜನೆಯಡಿ ಗ್ರಾಮವಾರು ವೈಯಕ್ತಿಕ ಶೌಚಾಲಯಗಳ ಭೌತಿಕ ಪ್ರಗತಿ ವಿವರ (2013-14ನೇ ಸಾಲು)

| | | | |
|---|---|---|---|
| | | ಚಟ್ಟೇನಹಳ್ಳಿ | 5 |
| | | ಚುಂಚೇನಹಳ್ಳಿ | 8 |
| | | ತಿಗಳರಪಾಳ್ಯ | 3 |
| | | ತೊಗರಿಘಟ್ಟ | 10 |
| | | ಪಟ್ಟೇನಹಳ್ಳಿ | 7 |
| | | ಬಿಳೇಕಲ್ಲಹಳ್ಳಿ | 2 |
| | | ಲಿಂಗದವೀರನಹಳ್ಳಿ | 3 |
| | | ಸಿ.ಪಿ.ಪಾಳ್ಯ | 2 |
| | | ಒಟ್ಟು | 66 |
| 5 | ಬೂದಗವಿ | ಬೂದಗವಿ | 23 |
| | | ದೊಗ್ಗನಹಳ್ಳಿ | 13 |
| | | ಸಿ.ಎನ್.ದುರ್ಗ | 11 |
| | | ಗೌಜಗಲ್ಲು | 2 |
| | | ನೇಗಲಾಲ; | 3 |
| | | ಬೆಂಡೋಣಿ | 5 |
| | | ಮಲ್ಲೇಕಾವು | 6 |
| | | ಒಟ್ಟು | 63 |
| 6 | ಬುಕ್ಕಪಟ್ಟಣ | ಬುಕ್ಕಪಟ್ಟಣ | 8 |
| | | ಗಟ್ಟಹಳ್ಳಿ | 5 |
| | | ಗೊಂದಿಹಳ್ಳಿ | 4 |
| | | ಗಾಂಧಿನಗರ | 1 |
| | | ಗಟ್ಟಗೊಲ್ಲಹಳ್ಳಿ | 12 |
| | | ಶ್ರೀನಿವಾಸಪುರ | 1 |
| | | ಬರಕ | 3 |
| | | ಮಾರುತಿನಗರ | 2 |
| | | ಒಟ್ಟು | 36 |
| 7 | ಬೈಚಾಪುರ | ಬೈಚಾಪುರ | 22 |
| | | ಹನುಮೇನಹಳ್ಳಿ | 2 |
| | | ಕ್ಯಾಶವಾರ | 3 |
| | | ಗೊಡ್ರಹಳ್ಳಿ | 5 |
| | | ಚಕ್ಕನಹಳ್ಳಿ | 6 |
| | | ಬಸವನಹಳ್ಳಿ | 2 |
| | | ಬುಡ್ಡೇನಹಳ್ಳಿ | 7 |
| | | ಒಟ್ಟು | 47 |

ಕಾಲ್ಪನಿಕ ಕಾರ್ಯಾಲಯ, ಕೊರಟಗೆರೆ, ವಲ್ಲಿ ಜಂಕ್ಷನ್, ತುಮಕೂರು. A1

ಎಸ್.ಬಿ.ಎ. ಮತ್ತು ನನೆಗಾ ಯೋಜನೆಯಡಿ ಗ್ರಾಮವಾರು ವೈಯಕ್ತಿಕ ಶೌಚಾಲಯಗಳ ಭೌತಿಕ ಪ್ರಗತಿ ವಿವರ (2013–14ನೇ ಸಾಲು)

| | | | |
|---|---|---|---|
| 13 | ಕೋಳಾಲ | ಕೋಳಾಲ | 4 |
| | | ಮಲಗೋನಹಳ್ಳಿ | 6 |
| | | ಹನುಮಂತಗಿರಿ | 7 |
| | | ಗೋಪೇನಹಳ್ಳಿ | 1 |
| | | ಮಾರುತಿನಗರ | 1 |
| | ಒಟ್ಟು | | 19 |
| 14 | ಕುರಂಕೋಟೆ | ಕುರಂಕೋಟೆ | 2 |
| | | ಜುಂಜುರಾಮನಹಳ್ಳಿ | 7 |
| | | ಜೋನಿಗೆರಹಳ್ಳಿ | 16 |
| | | ಬಂಡೇನಹಳ್ಳಿ | 1 |
| | | ಮಣುವಿನಕುರಿಕೆ | 8 |
| | ಒಟ್ಟು | | 34 |
| 15 | ಕ್ಯಾಮೇನಹಳ್ಳಿ | ಕ್ಯಾಮೇನಹಳ್ಳಿ | 4 |
| | | ಬಿದಲೋಟೆ | 11 |
| | | ಕೋಡ್ಲಹಳ್ಳಿ | 14 |
| | | ಚಿಂಪುಗಾನಹಳ್ಳಿ | 6 |
| | | ಚಿಕ್ಕವಳ್ಳಿ | 7 |
| | | ಶಕುನಿತಿಮ್ಮನಹಳ್ಳಿ | 4 |
| | | ಶಿರಗೋನಹಳ್ಳಿ | 6 |
| | | ಶಾಂತಲಿಂಗಯ್ಯನಪಾಳ್ಯ | 8 |
| | | ಹೊನ್ನಾರನಹಳ್ಳಿ | 4 |
| | ಒಟ್ಟು | | 64 |
| 16 | ಮಾವತ್ತೂರು | ಮಾವತ್ತೂರು | 11 |
| | | ಚೆನ್ನವಡೇರಹಳ್ಳಿ | 2 |
| | | ಪಟ್ಟದೇವರಪಾಳ್ಯ | 3 |
| | | ಪುಟ್ಟಸಂದ್ರ | 7 |
| | | ಲಿಂಗಾಪುರ | 1 |
| | ಒಟ್ಟು | | 24 |
| 17 | ನೀಲಗೊಂಡನಹಳ್ಳಿ | ನೀಲಗೊಂಡನಹಳ್ಳಿ | 1 |
| | | ಇರಕಸಂದ್ರ | 2 |
| | | ಅಳಾಲಸಂದ್ರ | 7 |
| | | ಚಿಕ್ಕಪಾಲನಹಳ್ಳಿ | 4 |
| | | ಹಳಿಸೊಪ್ಪನಹಳ್ಳಿ | 2 |
| | | ದೊಡ್ಡಪಾಲನಹಳ್ಳಿ | 2 |

ತಾಲ್ಲೂಕಿನ ಸಂಪೂರ್ಣ ಹೋಬಳಿಗಳ, ಜಿಲ್ಲಾ ಪಂಚಾಯಿತಿ, ಶಿವಮೊಗ್ಗ.

ಎಸ್.ಸಿ.ಪಿ. ಮತ್ತು ಟಿಎಸ್‌ಪಿ ಯೋಜನೆಯಡಿ ಗ್ರಾಮವಾರು ವೈಯಕ್ತಿಕ ಕಾಮಗಾರಿಯಗಳ ಭೌತಿಕ ಪ್ರಗತಿ ವಿವರ (2013–14ನೇ ಸಾಲು)

| | | | |
|---|---|---|---|
| 8 | ಚಿನ್ನಹಳ್ಳಿ | ಚಿನ್ನಹಳ್ಳಿ | 12 |
| | | ಕಾಲುವೇಹಳ್ಳಿ | 4 |
| | | ಗೆದ್ದೆನಹಳ್ಳಿ | 1 |
| | | ಸುಂಕದಹಳ್ಳಿ | 3 |
| | | ಪುರದಹಳ್ಳಿ | 9 |
| | | ಭೈರಗೊಂಡ್ಲು | 5 |
| | | ರಾವುಕನಹಳ್ಳಿ | 2 |
| | | ಒಟ್ಟು | 36 |
| 9 | ದೊಡ್ಡಸಾಗ್ಗೆರೆ | ದೊಡ್ಡಸಾಗ್ಗೆರೆ | 14 |
| | | ಅಲಪನಹಳ್ಳಿ | 4 |
| | | ಗಜಮುದ್ದನಹಳ್ಳಿ | 14 |
| | | ಎಂ.ಗೊಲ್ಲಹಳ್ಳಿ | 3 |
| | | ಮಧ್ಯವೆಂಕಟಾಪುರ | 1 |
| | | ಲಂಕೇನಹಳ್ಳಿ | 1 |
| | | ಮೋಲೇನಹಳ್ಳಿ | 1 |
| | | ಒಟ್ಟು | 38 |
| 10 | ಹಂಚಿಹಳ್ಳಿ | ಹಂಚಿಹಳ್ಳಿ | 3 |
| | | ನಾಗೇನಹಳ್ಳಿ | 13 |
| | | ತಣ್ಣೇನಹಳ್ಳಿ | 9 |
| | | ಬಜ್ಜನಹಳ್ಳಿ | 2 |
| | | ಬೋಡಬಂಡೇನಹಳ್ಳಿ | 2 |
| | | ಮಲ್ಲೇಶಪುರ | 3 |
| | | ಒಟ್ಟು | 37 |
| 11 | ಹೊಳವನಹಳ್ಳಿ | ಹೊಳವನಹಳ್ಳಿ | 58 |
| | | ಕರಕಲಘಟ್ಟ | 7 |
| | | ದುಗ್ಗೇನಹಳ್ಳಿ | 11 |
| | | ಒಟ್ಟು | 76 |
| 12 | ಹೂಲಿಕುಂಟೆ | ಹೂಲಿಕುಂಟೆ | 13 |
| | | ಕಾಮರಾಜನಹಳ್ಳಿ | 7 |
| | | ಕಾಮೇನಹಳ್ಳಿ | 2 |
| | | ಗೌರಗಾನಹಳ್ಳಿ | 8 |
| | | ಹರಿಹರಪ್ಪನವಾಳ್ಯ | 5 |
| | | ಕರೆಕಲ್ಲಹಟ್ಟಿ | 1 |
| | | ಒಟ್ಟು | 36 |

| ತಾಲ್ಲೂಕಿನ ಪಂಚಾಯತ್, ಕೊರಟಗೆರೆ, ಜಿಲ್ಲಾ ಪಂಚಾಯತ್, ತುಮಕೂರು. | | | |
|---|---|---|---|
| ಎನ್.ಬಿ.ಎ. ಮತ್ತು ನರೇಗಾ ಯೋಜನೆಯಡಿ ಗ್ರಾಮವಾರು ವೈಯಕ್ತಿಕ ಶೌಚಾಲಯಗಳ ಭೌತಿಕ ಪ್ರಗತಿ ವಿವರ (2013–14ನೇ ಸಾಲು) | | | |
| 21 | ವಡ್ಡಗೆರೆ | ವಡ್ಡಗೆರೆ | 58 |
| | | ಎತ್ತಗಾನಹಳ್ಳಿ | 41 |
| | | ಕಲ್ಕೆರೆ | 9 |
| | | ಕುರುಡುಗಾನಹಳ್ಳಿ | 5 |
| | | ಗರಗದೊಡ್ಡಿ | 56 |
| | | ಗೂಬಲಗುಟ್ಟೆ | 2 |
| | | ಬಚೀಲಗಾನಹಳ್ಳಿ | 10 |
| | | ಬುರುಗನಹಳ್ಳಿ | 1 |
| | | ಭಕ್ತರಹಳ್ಳಿ | 19 |
| | | ಯಾದಗೆರೆ | 2 |
| | ಒಟ್ಟು | | 203 |
| 22 | ವಜ್ಜನಕುರಿಕೆ | ವಜ್ಜನಕುರಿಕೆ | 7 |
| | | ಪಾಕಗಾನಹಳ್ಳಿ | 6 |
| | | ಬೇಡರ ಅಗ್ರಹಾರ | 3 |
| | | ದುಡ್ಡನಪಳ್ಳಿ | 1 |
| | | ಬಂಡೇಪಾಳ್ಯ | 2 |
| | | ಮಾರಗೊಂಡನಗುಣಿ | 4 |
| | | ಎರಪ್ಪನಹಳ್ಳಿ | 2 |
| | | ಮೋರಗಾನಹಳ್ಳಿ | 2 |
| | ಒಟ್ಟು | | 27 |
| 23 | ಎಲೇರಾಂಪುರ | ಎಲೇರಾಂಪುರ | 17 |
| | | ನಾಗೇನಹಳ್ಳಿ | 1 |
| | | ಕಂಗನಹಳ್ಳಿ | 4 |
| | | ವಡ್ಡರಹಳ್ಳಿ | 3 |
| | | ಸಿಂಗ್ರಿಹಳ್ಳಿ | 1 |
| | | ಸಿದ್ದಾಪುರ | 1 |
| | ಒಟ್ಟು | | 27 |
| | ಒಟ್ಟು | | 230 |

ಪ್ರಶ್ನೆ ಕೆಲವಾರುಗಳಿಗೆ, ನೀಡಲಾಗುವ ಉತ್ತರ ಸಂಖ್ಯೆಗಳು ಮತ್ತು ದಿನಾಂಕ.

ಬಿ.ಎ. ಮತ್ತು ನರೇಗಾ ಯೋಜನೆಯಡಿ ಗ್ರಾಮವಾರು ವೈಯಕ್ತಿಕ ಶೌಚಾಲಯಗಳ ಭೌತಿಕ ಪ್ರಗತಿ ವಿವರ (2013–14ನೇ ಸಾಲು)

| | | | |
|---|---|---|---|
| | | ಹೊಸಕೋಟೆ | 1 |
| | | ಸಂಕೇನಹಳ್ಳಿ | 1 |
| | | ಸೀಗೇಪಾಳ್ಯ | 1 |
| | ಒಟ್ಟು | | 21 |
| 18 | ತೀತಾ | ತೀತಾ | 7 |
| | | ಕೆಂಗನಪಾಳ್ಯ | 2 |
| | | ಕಂಬದಹಳ್ಳಿ | 1 |
| | | ಗಡ್ಡೋಬನಹಳ್ಳಿ | 1 |
| | | ಗೊರವನಹಳ್ಳಿ | 1 |
| | | ಟಿ.ವೆಂಕಟಾಪುರ | 2 |
| | | ತಿಮ್ಮನಹಳ್ಳಿ | 2 |
| | | ತುಂಬುಗಾನಹಳ್ಳಿ | 7 |
| | | ನರಸಯ್ಯನಪಾಳ್ಯ | 1 |
| | | ಪುಟ್ಟರಸಮ್ಮನಪಾಳ್ಯ | 1 |
| | | ಮರಚರಪಳ್ಳಿ | 5 |
| | | ಮಾದವಾರ | 5 |
| | | ವೀರಾಪುರ | 2 |
| | ಒಟ್ಟು | | 37 |
| 19 | ತೋವಿನಕೆರೆ | ತೋವಿನಕೆರೆ | 10 |
| | | ಕುರಿಹಳ್ಳಿ | 18 |
| | | ಸಿ.ಎಸ್.ಜಿ.ಪಾಳ್ಯ | 4 |
| | | ಕಬ್ಬಿಗೆರೆ | 1 |
| | | ಸೂರೇನಹಳ್ಳಿ | 3 |
| | | ಬೋರಯ್ಯನಹಟ್ಟಿ | 2 |
| | | ಸಿ.ವಿ.ಡಿ.ಪಾಳ್ಯ | 3 |
| | | ಬಿ.ಡಿ.ಎಂ.ಪಾಳ್ಯ | 1 |
| | | ವೆಂಕಟರವಣನಹಳ್ಳಿ | 2 |
| | ಒಟ್ಟು | | 44 |
| 20 | ತುಂಬಾಡಿ | ತುಂಬಾಡಿ | 10 |
| | | ಟಿ.ಗೊಲ್ಲಹಳ್ಳಿ | 1 |
| | | ಕಂಬದಹಳ್ಳಿ | 2 |
| | | ಪೆಮ್ಮದೇವರಹಳ್ಳಿ | 3 |
| | | ಪುಟ್ಟಮ್ಮನಪಾಳ್ಯ | 5 |
| | ಒಟ್ಟು | | 21 |

| ತಾಲ್ಲೂಕಿನ ಪಂಚಾಯತ್, ಕೊರಟಗೆರೆ, | | | ಜಿಲ್ಲಾ ಪಂಚಾಯತ್, ತುಮಕೂರು. |
|---|---|---|---|
| ಎನ್.ಡಿ.ಎ. ಮತ್ತು ನರೇಗಾ ಯೋಜನೆಯಡಿ ಗ್ರಾಮವಾರು ವೈದ್ಯಕೀಯ ಶಾಲೆಗಳ ಭೌತಿಕ ಪ್ರಗತಿ ವಿವರ (2012-13ನೇ ಸಾಲು) | | | |
| | | ಸೀಗೇಪಾಳ್ಯ | 1 |
| | | ಒಟ್ಟು | 12 |
| 18 | ತೀತಾ | ತೀತಾ | 4 |
| | | ಕೆಂಗನಪಾಳ್ಯ | 4 |
| | | ಟಿ.ವೆಂಕಟಾಪುರ | 3 |
| | | ಕುಂಬುಗಾನಹಳ್ಳಿ | 2 |
| | | ನರಸಯ್ಯನಪಾಳ್ಯ | 2 |
| | | ಮಾದವಾರ | 3 |
| | | ಒಟ್ಟು | 18 |
| 19 | ಕೋವಿನಕೆರೆ | ಕೋವಿನಕೆರೆ | 11 |
| | | ಕುರಿಹಳ್ಳಿ | 2 |
| | | ಸಿ.ಎಸ್.ಪಿ.ಪಾಳ್ಯ | 6 |
| | | ಕಡ್ಡಿಗೆರೆ | 4 |
| | | ಸೂರೇನಹಳ್ಳಿ | 2 |
| | | ಬೋರಯ್ಯನಪಟ್ಟಿ | 3 |
| | | ಸಿ.ವಿ.ಡಿ.ಪಾಳ್ಯ | 1 |
| | | ಬಿ.ಡಿ.ಎಂ.ಪಾಳ್ಯ | 2 |
| | | ವೆಂಕಟರವಣನಹಳ್ಳಿ | 4 |
| | | ಒಟ್ಟು | 35 |
| 20 | ಕುಂದಾಡಿ | ಕುಂದಾಡಿ | 4 |
| | | ಮೈಲಾರದೇವರಹಳ್ಳಿ | 2 |
| | | ಒಟ್ಟು | 6 |
| 21 | ವಡ್ಡಗೆರೆ | ವಡ್ಡಗೆರೆ | 26 |
| | | ಎಮ್ಮಗಾನಹಳ್ಳಿ | 22 |
| | | ಕಲ್ಕೆರೆ | 9 |
| | | ಕುರುಪಗಾನಹಳ್ಳಿ | 12 |
| | | ಗೂಬಲಗುಟ್ಟೆ | 2 |
| | | ಬಚೇಲಗಾನಹಳ್ಳಿ | 10 |
| | | ಬುರುಗನಹಳ್ಳಿ | 6 |
| | | ಧಕ್ಕರಹಳ್ಳಿ | 19 |
| | | ಯಾದಗೆರೆ | 8 |
| | | ಒಟ್ಟು | 114 |
| 22 | ವಡ್ಡನಕುರಿಕೆ | ವಡ್ಡನಕುರಿಕೆ | 2 |
| | | ವಾತಗಾನಹಳ್ಳಿ | 2 |
| | | ಬೇಡರ ಅಗ್ರಹಾರ | 1 |
| | | ರುದ್ದನಹಳ್ಳಿ | 1 |
| | | ಒಟ್ಟು | 6 |
| 23 | ಎಲೇರಾಂಪುರ | ಎಲೇರಾಂಪುರ | 8 |
| | | ನಾಗೇನಹಳ್ಳಿ | 1 |
| | | ತಂಗಡಹಳ್ಳಿ | 3 |
| | | ವಡ್ಡರಹಳ್ಳಿ | 4 |
| | | ಒಟ್ಟು | 16 |
| | | | 230 |

ಅನುಬಂಧ -2A

ಶ್ರೀ ಸುಧಾಕರ್ ಲಾಲ್ ಎ.ಆರ್. ಮಾನ್ಯ ಶಾಸಕರು ಕೊರಟಗೆರೆ ವಿಧಾನಸಭಾ ಕ್ಷೇತ್ರ ರವರ ಚುಕ್ಕೆ ಗುರುತಿನ/ ಗುರುತಿಲ್ಲದ ಪ್ರಶ್ನೆ ಸಂಖ್ಯೆ 349 (2013-14)

| ಕ್ರ.ಸಂ | ಗ್ರಾಮ ಪಂಚಾಯತಿ | ಗ್ರಾಮಪಾರು ಶೌಚಾಲಯ ಪ್ರಗತಿ | NBA ಯೋಜನೆಯಡಿ ಪಾವತಿಸಿರುವ ಪ್ರೋತ್ಸಾಹ ಧನ | MGNREGA ಯೋಜನೆಯಡಿ ಪಾವತಿಸಿರುವ ಪ್ರೋತ್ಸಾಹ ಧನ | NBA/MGNREGA ಯೋಜನೆಯಡಿ ಪಾವತಿಸಿರುವ ಒಟ್ಟು ಮೊತ್ತ | ಗ್ರಾಮ ಪಂಚಾಯತಿವಾರು ಪ್ರೋತ್ಸಾಹಧನ ಪಾವತಿಸಲು ಬಾಕಿ ಇರುವ ಫಲಾನುಭವಿಗಳ ಸಂಖ್ಯೆ | NBA ಯೋಜನೆಯಡಿ ಪಾವತಿಸಲು ಬಾಕಿ ಇರುವ ಪ್ರೋತ್ಸಾಹ ಧನ ಮೊತ್ತ | MGNREGA ಯೋಜನೆಯಡಿ ಪಾವತಿಸಲು ಬಾಕಿ ಇರುವ ಮೊತ್ತ |
|---|---|---|---|---|---|---|---|---|
| 1 | ಅಗ್ಗಹಾರ | 62 | 2.91400 | 2.60400 | 5.51800 | 0 | 0 | 0.00000 |
| 2 | ಅಕ್ಕಿರಾಂಪುರ | 34 | 1.59800 | 1.42800 | 3.02600 | 0 | 0 | 0.00000 |
| 3 | ಅರಸಾಪುರ | 36 | 1.69200 | 1.51200 | 3.20400 | 0 | 0 | 0.00000 |
| 4 | ಬಿ.ಡಿ.ಪುರ | 42 | 1.97400 | 1.76400 | 3.73800 | 0 | 0 | 0.00000 |
| 5 | ಬೂದುಗವಿ | 35 | 1.64500 | 1.47000 | 3.11500 | 0 | 0 | 0.00000 |
| 6 | ಬುಕ್ಕಪಟ್ಟಣ | 5 | 0.23500 | 0.21000 | 0.44500 | 0 | 0 | 0.00000 |
| 7 | ಬೈಚಾಪುರ | 6 | 0.28200 | 0.25200 | 0.53400 | 0 | 0 | 0.00000 |
| 8 | ಚಿಕ್ಕಹಳ್ಳಿ | 2 | 0.09400 | 0.08400 | 0.17800 | 0 | 0 | 0.00000 |
| 9 | ದೊಡ್ಡಸಾಗ್ಗೆರೆ | 23 | 1.08100 | 0.96600 | 2.04700 | 0 | 0 | 0.00000 |
| 10 | ಹಟಹಳ್ಳಿ | 8 | 0.37600 | 0.33600 | 0.71200 | 0 | 0 | 0.00000 |
| 11 | ಹೊಳವನಹಳ್ಳಿ | 24 | 1.12800 | 1.00800 | 2.13600 | 0 | 0 | 0.00000 |
| 12 | ಹೂಲಿಕುಟ | 8 | 0.37600 | 0.33600 | 0.71200 | 0 | 0 | 0.00000 |
| 13 | ಕೋಳಾಲ | 16 | 0.75200 | 0.67200 | 1.42400 | 0 | 0 | 0.00000 |
| 14 | ಕುರಕೋಟೆ | 5 | 0.23500 | 0.21000 | 0.44500 | 0 | 0 | 0.00000 |
| 15 | ಜ್ಯಾಮೇನಹಳ್ಳಿ | 17 | 0.79900 | 0.71400 | 1.51300 | 0 | 0 | 0.00000 |
| 16 | ಮಾವತ್ತೂರು | 0 | 0.00000 | 0.00000 | 0.00000 | 0 | 0 | 0.00000 |
| 17 | ನೀಲಗೊಡನಹಳ್ಳಿ | 12 | 0.56400 | 0.50400 | 1.06800 | 0 | 0 | 0.00000 |
| 18 | ಪೇಪಾ | 18 | 0.84600 | 0.75600 | 1.60200 | 0 | 0 | 0.00000 |
| 19 | ತೋವಿನಕೆರೆ | 35 | 1.64500 | 1.47000 | 3.11500 | 0 | 0 | 0.00000 |
| 20 | ಪುಟಾಡಿ | 6 | 0.28200 | 0.25200 | 0.53400 | 0 | 0 | 0.00000 |
| 21 | ಪಡ್ಡಗೆರೆ | 114 | 5.35800 | 4.78800 | 10.14600 | 0 | 0 | 0.00000 |
| 22 | ವಡ್ಡಕಕುರಿಕೆ | 6 | 0.28200 | 0.25200 | 0.53400 | 0 | 0 | 0.00000 |
| 23 | ವಿಲೇಜಾಪುರ | 16 | 0.75200 | 0.67200 | 1.42400 | 0 | 0 | 0.00000 |
| ಒಟ್ಟು | | 530 | 24.91000 | 22.26000 | 47.17000 | 0 | 0 | |

ಅನುಬಂಧ –2B

ಶ್ರೀ ಸುಧಾಕರ್ ಲಾಲ್ ಪಿ.ಆರ್. ಮಾನ್ಯ ಶಾಸಕರು ಕೊರಟಗೆರೆ ವಿಧಾನಸಭಾ ಕ್ಷೇತ್ರ ರವರ ಚುಕ್ಕೆ ಗುರುತಿನ/ ಗುರುತಿಲ್ಲದ ಪ್ರಶ್ನೆ ಸಂಖ್ಯೆ G49 (2013-14)

| ಕ್ರ.ಸಂ | ಗ್ರಾಮ ಪಂಚಾಯಿತಿ | ಗ್ರಾಮವಾರು ಶೌಚಾಲಯ ಪ್ರಗತಿ | NBA ಯೋಜನೆಯಡಿ ಪಾವತಿಸಿರುವ ಪ್ರೋತ್ಸಾಹಧನ | MGNREGA ಯೋಜನೆಯಡಿ ಪಾವತಿಸಿರುವ ಪ್ರೋತ್ಸಾಹಧನ | NBA/MGNREGA ಯೋಜನೆಯಡಿ ಪಾವತಿಸಿರುವ ಪ್ರೋತ್ಸಾಹಧನ | ಗ್ರಾಮಪಂಚಾಯಿತಿವಾರು ಪ್ರೋತ್ಸಾಹಧನ ಪಾವತಿಸಲು ಬಾಕಿ ಇರುವ ಫಲಾನುಭವಿಗಳ ಸಂಖ್ಯೆ | NBA ಯೋಜನೆಯಡಿ ಪಾವತಿಸಲು ಬಾಕಿ ಇರುವ ಪ್ರೋತ್ಸಾಹಧನ ಮೊತ್ತ | MGNREGA ಯೋಜನೆಯಡಿ ಪಾವತಿಸಲು ಬಾಕಿ ಇರುವ ಮೊತ್ತ |
|---|---|---|---|---|---|---|---|---|
| 1 | ಅಗ್ರಹಾರ | 100 | 3.384 | 1.934 | 5.318 | 8 | 0.376 | 2.56600 |
| 2 | ಅಕ್ಕಿರಾಮಪುರ | 105 | 4.371 | 3.1688 | 7.5398 | 6 | 0.282 | 1.55620 |
| 3 | ಅರಸಾಪುರ | 74 | 3.478 | 2.3663 | 5.8443 | 0 | 0 | 0.96370 |
| 4 | ಬಿ.ಡಿ.ಪುರ | 66 | 2.538 | 2.8499 | 5.3879 | 7 | 0.329 | 0.12010 |
| 5 | ಬೂದುಗವಿ | 63 | 2.773 | 1.977 | 4.75 | 4 | 0.188 | 0.85800 |
| 6 | ಬುಕ್ಕಪಟ್ಟಣ | 36 | 1.692 | 1.5419 | 3.2339 | 0 | 0 | 0.07810 |
| 7 | ಭೈರಾಪುರ | 47 | 2.209 | 0.576 | 2.785 | 0 | 0 | 1.53900 |
| 8 | ಚಿಕ್ಕಪಳ್ಳಿ | 36 | 1.692 | 1.5008 | 3.1928 | 0 | 0 | 0.11920 |
| 9 | ದೊಡ್ಡಸಾಗ್ಗೆರೆ | 38 | 1.786 | 1.2812 | 3.0672 | 0 | 0 | 0.42880 |
| 10 | ಹುಚಗಲ್ಲು | 32 | 1.504 | 0.7697 | 2.2737 | 0 | 0 | 0.67030 |
| 11 | ಹುಳಿಯಪಳ್ಳಿ | 76 | 2.867 | 2.9285 | 5.7955 | 8 | 0.376 | 0.49150 |
| 12 | ಹುಲಿಕುಟ | 36 | 1.692 | 0.7764 | 2.4684 | 0 | 0 | 0.84360 |
| 13 | ಕೋಳಾಲ | 19 | 0.893 | 0.6649 | 1.5579 | 0 | 0 | 0.19010 |
| 14 | ಕುರಹೋಬ | 34 | 1.598 | 1.126 | 2.724 | 0 | 0 | 0.40400 |
| 15 | ಕ್ಯಾದಂಡಪಳ್ಳಿ | 64 | 2.679 | 2.0522 | 4.7312 | 5 | 0.235 | 0.82780 |
| 16 | ಮಾವತ್ತೂರು | 24 | 1.128 | 0.9696 | 2.0976 | 0 | 0 | 0.11040 |
| 17 | ನೀಲಗೊಂಡಪಳ್ಳಿ | 21 | 0.987 | 0.4729 | 1.4599 | 0 | 0 | 0.47210 |
| 18 | ತೀತಾ | 37 | 1.363 | 0.9473 | 2.3103 | 8 | 0.376 | 0.71770 |
| 19 | ಕೋವಿದಕಲ | 44 | 2.068 | 1.2726 | 3.3406 | 0 | 0 | 0.70740 |
| 20 | ಪುಟಾಪಿ | 21 | 0.987 | 0.534 | 1.521 | 0 | 0 | 0.41100 |
| 21 | ದಬ್ಬಗಟ | 203 | 7.849 | 4.1553 | 12.0043 | 6 | 0.282 | 4.97970 |
| 22 | ಮಲ್ಲಸಕುರಿಕೆ | 27 | 1.269 | 1.0892 | 2.3582 | 0 | 0 | 0.12580 |
| 23 | ವಿಲೇಜಾಪುರ | 27 | 1.269 | 0.7576 | 2.0266 | 0 | 0 | 0.45740 |
| | ಟೊಟ್ಟು | 1230 | 52.076 | 35.7121 | 87.7881 | 52 | 2.444 | 19.6379 |

**ಶ್ರೀ ಸುಧಾಕರ ಲಾಲ್ ಪಿ.ಆರ್ :** ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರೇನು ಉತ್ತರ ಕೊಟ್ಟಿದ್ದಾರೆ ಆ ಉತ್ತರ ಸಂಪೂರ್ಣವಾಗಿಲ್ಲ. ನಾನು ಕೇಳಿರುವುದು ಕೊರಟಗೆರೆ ವಿಧಾನ ಸಭಾ ಕ್ಷೇತ್ರದಲ್ಲಿ ನಿರ್ಮಲ ಭಾರತ್ ಅಭಿಯಾನ, ನರೇಗಾ ಯೋಜನೆಯಡಿ ಶೌಚಾಲಯಗಳನ್ನು ನಿರ್ಮಾಣ ಮಾಡಿರುವುದರ ಬಗ್ಗೆ ನಾನು ಕೇಳಿದ್ದೆ. ಆದರೆ, ಉತ್ತರ ಕೊಟ್ಟಿರುವುದು ಕೇವಲ ಕೊರಟಗೆರೆ ತಾಲ್ಲೂಕಿಗೆ ಸಂಬಂಧಿಸಿದಂತೆ ಮಾತ್ರ ಕೊಟ್ಟಿದ್ದಾರೆ. ನನ್ನ ಕ್ಷೇತ್ರ ಮಧುಗಿರಿ ತಾಲ್ಲೂಕಿನ ಪುರವರ ಹೋಬಳಿಗೆ ಸೇರಿದೆ ಮತ್ತು ತುಮಕೂರು ತಾಲ್ಲೂಕಿನ ಕೋರಾ ಹೋಬಳಿಗೆ ನನ್ನ ಕ್ಷೇತ್ರವಾದ ಕೊರಟಗೆರೆ ತಾಲ್ಲೂಕಿನ ಜೊತೆಯಲ್ಲಿ ಸೇರಿದೆ. ಹೀಗಾಗಿ ಪರಿಪೂರ್ಣವಾಗಿರತಕ್ಕಂಥ ಉತ್ತರವನ್ನು ಕೊಟ್ಟ ನಂತರ ಬಹುಶಃ ಚರ್ಚೆ ಮಾಡಿದರೆ ಸೂಕ್ತ ಎಂದೆನಿಸುತ್ತದೆ.

**ಶ್ರೀ ಹೆಚ್.ಕೆ. ಪಾಟೀಲ್ :** ಈ ಪ್ರಶ್ನೆ ನೋಡುವಾಗ ನನಗೂ ಕೊರಟಗೆರೆ ಕ್ಷೇತ್ರದ ವ್ಯಾಪ್ತಿ ಗೊತ್ತಾಗಿರಲಿಲ್ಲ. ತಾವು ಈಗ ನನ್ನ ಗಮನಕ್ಕೆ ತಂದಿದ್ದೀರಿ. ನಾನು ಮತ್ತೆ ಇದನ್ನು ನೋಡುತ್ತೇನೆ.

HON'BLE SPEAKER: Very good. O.K.

**ಶ್ರೀ ಹೆಚ್.ಕೆ. ಪಾಟೀಲ್ :** ಆದರೆ, ತಾವು ಏನು ಕೇಳಿದಿರಿ ಆ ತಾಲ್ಲೂಕಿನ ವಿಚಾರವೂ ನಿಮಗೆ ಬಹಳ ಮಹತ್ವದ್ದೆ. ನಿಮಗೆ ಬೇಕಾಗಿರತಕ್ಕಂಥ ಮಾಹಿತಿ, ಬಾಕಿ ಏನು 2 ಲಕ್ಷದ 44 ಸಾವಿರ NBA ದಲ್ಲಿ ಕೊಡಬೇಕಾಗಿದೆ. ಅದನ್ನು ಸಹ ನಾನು ಕೊಟ್ಟಿದ್ದೇನೆ. ನಿಮ್ಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಉಳಿದ ನಿಮ್ಮ ಎರಡು ಹೋಬಳಿಗಳ ಮಾಹಿತಿ ಏನು ಇದೆ ಅದನ್ನು ನಾನು ನಿಮಗೆ ಕಳುಹಿಸಿಕೊಡುತ್ತೇನೆ.

**ಶ್ರೀ ಸುಧಾಕರ ಲಾಲ್ ಪಿ.ಆರ್. :** ಇದರ ಜೊತೆಯಲ್ಲಿ ನಾನು ಹೇಳುವುದು ಏನೆಂದರೆ, ತಾವು NBA ಯಿಂದ 4,700/– ರೂಪಾಯಿ ಕೊಡುತ್ತೇವೆ, NREGA ರಿಂದ 4,500/– ರೂಪಾಯಿ ಕೊಡುತ್ತೇವೆಂದು ಹೇಳುತ್ತೀರಿ. ಆದರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ 5,000/– ರೂಪಾಯಿ ಕೊಡುವ ಯೋಜನೆ ಜಾರಿ ಜಾರಿಯಲ್ಲಿದೆ ಎಂಬುದು ನನ್ನ ಭಾವನೆ.

**ಶ್ರೀ ಹೆಚ್.ಕೆ. ಪಾಟೀಲ್ :** ಇದೆ.

**ಶ್ರೀ ಸುಧಾಕರ ಲಾಲ್ ಪಿ.ಆರ್. :** But ಅದನ್ನು, ಇಲ್ಲಿ ತೋರಿಸಿಲ್ಲ.

**ಅಧ್ಯಕ್ಷರು :** ನೀವು ಕೇಳಿಲ್ಲ ಕೊಟ್ಟಿಲ್ಲ ಅಷ್ಟೆ.

**ಶ್ರೀ ಹೆಚ್.ಕೆ. ಪಾಟೀಲ್ :** ಆ ಮಾಹಿತಿಯೂ ಬೇಕೆಂದರೆ, ನಿಮ್ಮ ತಾಲ್ಲೂಕಿನಲ್ಲಿ ನಿಮ್ಮ ಮತ ಕ್ಷೇತ್ರದಲ್ಲಿ special 5000/– ರೂಪಾಯಿ ಏನು ಇದೆ ಅದನ್ನು ಯಾರಿಗೆ ಕೊಟ್ಟಿದ್ದೇವೆ, ಕೊಟ್ಟಿರದಿದ್ದರೆ ಏಕೆ ಕೊಟ್ಟಿಲ್ಲ ಎನ್ನುವುದರ ಮಾಹಿತಿ ಕಳುಹಿಸಿ ಕೊಡುತ್ತೇವೆ.

**ಶ್ರೀ ಸುಧಾಕರ ಲಾಲ್ ಪಿ.ಆರ್. :** ಮಾನ್ಯ ಸಚಿವರೆ, ತಮ್ಮಲ್ಲಿ ನಾನು ಕೇಳಿಕೊಳ್ಳುವುದಿಷ್ಟೆ. ಇಲ್ಲಿ ಯಾವುದೂ ಬಾಕಿ ಇಲ್ಲ ಎಂದು ಕೊಟ್ಟಿದ್ದೀರಿ. ಆದರೆ, ಕೆಲವೊಂದು ಪಂಚಾಯಿತಿಗಳಲ್ಲಿ ತಾವು ಹೇಳುತ್ತೀರಿ, ಸುಮಾರು ಎರಡು ವರ್ಷಗಳಿಂದ ಬಾಕಿ ಇರತಕ್ಕಂಥ ಪ್ರಕರಣಗಳು ಬಹಳಷ್ಟು ಇವೆ.

**ಶ್ರೀ ಹೆಚ್.ಕೆ. ಪಾಟೀಲ್ :** ಇದ್ದರೆ ಮಾಹಿತಿ ಕೊಡಿ. ಬೇರೆ ಪಂಚಾಯಿತಿಗೆ ಹೋಗಬೇಡಿ ಇದರಲ್ಲಿ ನಾನು ಬಾಕಿ ಎಷ್ಟು ಇದೆ ಎಂಬುದನ್ನು ಕೊಟ್ಟಿದ್ದೇನೆ. ಹಾಗೆಯೇ ನಾನು ಕೊಟ್ಟಿರುವ ಅನುಬಂಧದಲ್ಲಿ ಪಂಚಾಯಿತಿವಾರು ಎಷ್ಟು ಕೊಟ್ಟಿದ್ದೇವೆಂದು ಹಾಗೂ ಬಾಕಿ ಇನ್ನೂ ಎಷ್ಟಿವೆ ಎಂಬ ಮಾಹಿತಿಯನ್ನು ಸಹ ಕೊಟ್ಟಿದ್ದೇನೆ.

**ಶ್ರೀ ಪಿ.ಆರ್. ಸುಧಾಕರ ಲಾಲ್ :** ಮಾನ್ಯ ಸಚಿವರೆ, ಹಣವನ್ನು ಆದಷ್ಟು ಬೇಗ ಬಿಡುಗಡೆ ಮಾಡಬೇಕು.

**ಅಧ್ಯಕ್ಷರು :** ಯಾವ್ಯಾವ ಪಂಚಾಯಿತಿಗೆ ಎಷ್ಟೆಷ್ಟು ಬಾಕಿ ಬರಬೇಕಾಗಿದೆ ಎಂಬ ಮಾಹಿತಿಯನ್ನು ಹೇಳಿ ?

**ಶ್ರೀ ಪಿ.ಆರ್. ಸುಧಾಕರ ಲಾಲ್ :** ಮಾನ್ಯ ಅಧ್ಯಕ್ಷರೆ, ಮಾಹಿತಿ ಕೊಟ್ಟಿದ್ದಾರೆ. ಆದರೆ, ಮಾನ್ಯ ಸಚಿವರಲ್ಲಿ ನಾನು ಆಗ್ರಹ ಮಾಡುವಂಥದು ಏನೆಂದರೆ, ಬಾಕಿ ಹಣವನ್ನು ಆದಷ್ಟು ಬೇಗ ಬಿಡುಗಡೆ ಮಾಡಬೇಕು. ಇಲ್ಲದಿದ್ದರೆ ಜನರಲ್ಲಿ ನಂಬಿಕೆ ಹೊರಟು ಹೋಗುತ್ತದೆ. ನಿರ್ಮಾಣ ಮಾಡಿದ ನಂತರ ನಮಗೆ ಹಣ ಬರುತ್ತದೆಯೇ ಅಥವಾ ಇಲ್ಲವೋ ಎಂಬ ಗ್ಯಾರಂಟಿ ಇಲ್ಲ ಎನ್ನುವ ಭಾವನೆ ಜನರಲ್ಲಿ ಬರುತ್ತಿದೆ. ಆದ್ದರಿಂದ, ಬಾಕಿ ಹಣವನ್ನು ಆದಷ್ಟು ಬೇಗ ಕೊಡತಕ್ಕಂಥ ಕೆಲಸವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಹೆಚ್.ಕೆ. ಪಾಟೀಲ್ :** ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕಳಕಳಿಯನ್ನು ಅರ್ಥ ಮಾಡಿಕೊಳ್ಳುತ್ತೇನೆ. ಎನ್.ಬಿ.ಎ. ಬಾಕಿ ಏನಿದೆ, ಅದನ್ನು ಪೂರ್ಣವಾಗಿ ಇದೇ

ವಾರದಲ್ಲಿ ಕೊಡಿ ಎಂದು instruction ಕೊಡುತ್ತೇನೆ. ಎನ್‌ಆರ್‌ಇಜಿಎಸ್ ಗೆ ಸಂಬಂಧಪಟ್ಟಂತೆ ಸುಮಾರು 19 ಲಕ್ಷ ರೂಪಾಯಿ ನಿಮ್ಮ ತಾಲ್ಲೂಕಿನದ್ದು ಬಾಕಿ ಇದೆ. ಎನ್‌ಆರ್‌ಇಜಿಎಸ್ ನ ಹಣ ಕೇಂದ್ರ ಸರ್ಕಾರದಿಂದ ನಮಗೆ ಬರಬೇಕಾಗಿದೆ. ಹಣ ಬಿಡುಗಡೆ ಮಾಡುವುದಕ್ಕೆ ಆದಷ್ಟು ಒತ್ತಡವನ್ನು ಹಾಕುತ್ತಿದ್ದೇವೆ. ಆ ಹಣ ಬಂದ ತಕ್ಷಣ ನಾವು ಬಿಡುಗಡೆ ಮಾಡುತ್ತೇವೆ.

**ಕೃಷಿಯೇತರ ಭೂಮಿಗಳ ನೋಂದಣಿಗೆ ಇ–ಸ್ವತ್ತು ಕಡ್ಡಾಯ**

38(92) **ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಶಿರಸಿ)** :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಸರ್ಕಾರವು ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿನ ಕೃಷಿಯೇತರ ಭೂಮಿಗಳ ನೋಂದಣಿಗೆ ಇ–ಸ್ವತ್ತು ಕಡ್ಡಾಯ ಮಾಡಲಾಗಿದೆಯೇ ; ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು; ಇ–ಖಾತಾ ಮಾಡಿದ ಆಸ್ತಿಯನ್ನು ಮಾತ್ರ ನೋಂದಣಿ ಮಾಡಲು ಸರ್ಕಾರ ಉದ್ದೇಶಿಸಿದೆಯೇ ;

(ಆ) ಸದರಿ ಸ್ವತ್ತುಗಳ ನೋಂದಣಿಗೆ ಇ–ಖಾತಾ ಹಾಗೂ ಫಾರ್ಮ್–9 ತೆಗೆದುಕೊಂಡು ಹೋಗುವುದು ಕಡ್ಡಾಯವಾಗಿದೆಯೇ ;

(ಇ) ಇದರಿಂದಾಗಿ ಆಸ್ತಿ ನೋಂದಣಿ ಪ್ರಕ್ರಿಯೆಗೆ ಅಡಚಣೆ ಉಂಟಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಭೂ ಪರಿವರ್ತನೆಗೊಂಡಿದ್ದರೂ ಕೂಡ ನಕ್ಷೆ ನಮೂದಿಸಿಕೊಳ್ಳದವರ ಆಸ್ತಿ ಮಾರಾಟ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಇಂತಹ ಆಸ್ತಿಗಳಿಗೆ ಇ–ಸ್ವತ್ತು ಪಡೆಯಲು ಅನುಸರಿಸಬೇಕಾದ ಕ್ರಮಗಳೇನು ; ಸರ್ಕಾರ ಇದಕ್ಕೆ ಕಾಲಮಿತಿಯೇನಾದರೂ ನಿಗದಿಪಡಿಸಿದೆಯೇ ? (ವಿವರ ನೀಡುವುದು)

**ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)** (ಅ) ಹೌದು. ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂ.12278/2007 ರಲ್ಲಿ ಅನಧಿಕೃತ ಆಸ್ತಿಗಳ ನೋಂದಣಿಯನ್ನು ತಡೆಯಲು ವ್ಯಾಪಕವಾದ ಸಮಗ್ರ ನೀತಿಯನ್ನು ಜಾರಿಗೆ ತರುವುದಕ್ಕೆ ಕಂದಾಯ, ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ ಇಲಾಖೆಗೆ ಡಿಸೆಂಬರ್ 2012 ರಲ್ಲಿ ನಿರ್ದೇಶನ ನೀಡಿರುತ್ತದೆ. ಈ ಹಿನ್ನೆಲೆಯಲ್ಲಿ,